# ಎ. ಪಂಕಜ ಅವರ ಕಾದಂಬರಿಗಳಲ್ಲಿ ದುರಂತ ನಾಯಕಿಯರು

**ಪುಟ್ಟಸ್ವಾಮಿ ಎನ್. ಎನ್.[1] & ಪುಟ್ಟಸ್ವಾಮಿ[2]**

[1]ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಹೇಮಗಂಗೋತ್ರಿ, ಹಾಸನ.

[2]ಪ್ರಾಧ್ಯಾಪಕರು, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಹೇಮಗಂಗೋತ್ರಿ, ಹಾಸನ.

**Received: 08-04-2024** ; **Acepted: 10-05-2024 ; Published: 08-06-2024**

**DOI: https://doi.org/10.5281/zenodo.11525869**

## ABSTRACT:

ಯಾವುದೇ ಸಾಹಿತಿಯಾದರೂ ಸಹ ಸಮಕಾಲೀನ ಸಮಾಜದ ನೈಜ ಜೀವನವನ್ನು ಇಲ್ಲವೇ ತಮ್ಮ ಮನದ ಭಾವನೆಗಳನ್ನು ಯಥಾವತ್ತಾಗಿ ಹೇಳುವಲ್ಲಿಯೂ ಕೂಡ ಆತನ ಸೃಜನಶೀಲತೆ ದುಡಿಯುತ್ತದೆ. ಎ. ಪಂಕಜ ಅವರು ಮಹಿಳಾ ಸಾಹಿತ್ಯ ಪರಂಪರೆಯಲ್ಲಿ 'ಸಮನ್ವಯ ಸಾಹಿತ್ಯದ ಲೇಖಕಿ' ಎಂದೇ ಪರಿಚಿತರು. ಇವರು ತಮ್ಮ ಕಾದಂಬರಿ ಮುಖೇನ ಸನ್ನಿವೇಶವನ್ನು ಪ್ರಸ್ತುತಪಡಿಸುತ್ತಾರೆಯೇ ಹೊರತು ಪ್ರತಿಭಟಿಸುವವರಲ್ಲ. ಕೆಲವೊಮ್ಮೆ ಆ ನಿಟ್ಟಿನ ಛಾಯೆಯನ್ನ ಕಾಣಬಹುದೇ ಹೊರತು ಯಾವ ಪಾತ್ರಗಳೂ ಸಹ ಬಲವಾಗಿ ಪ್ರತಿಭಟಿಸುವುದಿಲ್ಲ. ವಿಶೇಷವೆಂದರೆ ಇವರ ಕಾದಂಬರಿಗಳೆಲ್ಲವೂ ಭಾಗಶಃ ಸ್ತ್ರೀ ಕೇಂದ್ರಿತವೇ. ಆದರೂ ಸ್ತ್ರೀ ಪರವಾಗಿ ನಿಂತದ್ದು ಬಹಳ ಕಡಿಮೆ. ಸ್ತ್ರೀಯನ್ನು ಕೇಂದ್ರವಾಗಿಸಿಕೊಂಡು ಕುಟುಂಬದ ಜೊತೆಗೇ ಸಮಕಾಲೀನ ಸಾಮಾಜಿಕ ಬದುಕನ್ನು, ಹೆಣ್ಣಿನ ಸಾಮಾಜಿಕ ಸ್ಥಾನಮಾನವನ್ನು ಪ್ರಸ್ತುತಪಡಿಸುತ್ತಾರೆ. ಒಂದುವೇಳೆ ಅದು ಸ್ತ್ರೀಗೆ ತಕ್ಕುದಲ್ಲದಿದ್ದರೂ ಆ ಪಾತ್ರ ಪ್ರತಿಭಟಿಸುವ ಬದಲಿಗೆ ಒಪ್ಪಿ ನಡೆಯುತ್ತದೆ. 'ಬಯಕೆಯ ಬೆಂಕಿ'ಯ ವಲ್ಲಿ, ನಿರ್ಮಲೆ, ಕುಮುದಾ, 'ಮಾನಸ'ದ ಜಾನಕಿ, 'ಬಲಿಪಶು'ವಿನ ಮಂಜುಳಾ, 'ಅವನೇ ಕಾರಣ'ದ ಪಾರ್ವತಿ ಹೀಗೇ ಇವರ ಎಲ್ಲಾ ಸ್ತ್ರೀ ಪಾತ್ರಗಳೂ ಕೂಡ ತಮ್ಮ ಜೀವನದುದ್ದಕ್ಕೂ ಪುರುಷ ಪಾತ್ರ ಇಲ್ಲವೇ ಪುರುಷ ಪ್ರಧಾನ ಸಮಾಜದಿಂದ ಒಂದಿಲ್ಲೊಂದು ರೀತಿಯಲ್ಲಿ ಹಿಂಸೆಗೊಳಗಾಗಿವೆ. ತಮ್ಮ ಅನಿಸಿಕೆಗಳಿಗೆ ಅವಕಾಶವೇ ಇಲ್ಲವೆಂಬಂತೆ ಚಿತ್ರಿಸಲ್ಪಟ್ಟಿದ್ದು, ಕಡೆಗೆ ಅವಮಾನದಿಂದಲೋ, ಸಮಸಮಾಜವನ್ನು ಎದುರಿಸಲಾಗದೆಯೋ ಅಕಾಲಿಕವಾಗಿ ಮರಣವನ್ನಪ್ಪುತ್ತವೆ. ಸ್ತ್ರೀ ಸ್ಥಾನಮಾನ ಉನ್ನತೀಕರಣದತ್ತ ಮುಖ ಮಾಡಿದ್ದ ಕಾಲಘಟ್ಟದಲ್ಲೂ ಕೂಡ ಇವರ ಬರವಣಿಗೆ ಸ್ತ್ರೀ ವಿಚಾರದಲ್ಲಿ ತಾಟಸ್ಥ್ಯ ಧೋರಣೆ ತಾಳಿರುವುದು ವಿಪರ್ಯಾಸದ ಸಂಗತಿ.

**KEYWORDS:**

ಸ್ತ್ರೀ ಸ್ಥಾನಮಾನ, ಬಯಕೆ, ತಾಟಸ್ಥ್ಯ ಧೋರಣೆ, ಬಾಲ್ಯ ವಿವಾಹ, ದೌರ್ಭಾಗ್ಯ, ಪುರುಷ ಪ್ರಾಧಾನ್ಯತೆ.

ಮಾನವ ಬದುಕು ನಿತ್ಯ ಪರಿವರ್ತನಾಶೀಲವಾದುದು. ಸಾಮಾಜಿಕ ಬದುಕನ್ನು ಕುರಿತ ಬರಹಗಾರರ ಅಭಿವ್ಯಕ್ತ ಮಾರ್ಗಗಳೂ ಕೂಡ ಇದರಿಂದ ಹೊರತಾಗಿಲ್ಲ. ಇಪ್ಪತ್ತನೇ ಶತಮಾನದ ಸಾಹಿತ್ಯಕ ಬೆಳವಣಿಗೆಯಲ್ಲಾದ ಪಲ್ಲಟಗಳು ಇದನ್ನು ಪುಷ್ಟೀಕರಿಸುತ್ತವೆ. ಸ್ತ್ರೀ ಮತ್ತು ಪುರುಷರೀರ್ವರೂ ಮಾನವ ಸಮಾಜದ ಆಧಾರ ಸ್ತಂಭಗಳು. ಈರ್ವರಲ್ಲಿ ಯಾರೊಬ್ಬರ ಅನುಪಸ್ಥಿತಿಯಲ್ಲೂ ಸಮಾಜ ಪರಿಪೂರ್ಣವಾಗಲಾರದು. ಆದರೆ ಪರಂಪರಾಗತ ಸಮಾಜವನ್ನು ಗಮನಿಸಿದರೆ ಸ್ತ್ರೀ ಪುರುಷರೀರ್ವರ ಕುರಿತ ವಿಚಾರಧಾರೆಗಳಾಗಲಿ, ಕಟ್ಟುಪಾಡುಗಳಾಗಲಿ ಭಿನ್ನವಾದುವೆಂದು ಅರಿವಾಗದಿರದು. ಅಲ್ಲದೇ ಈ ಕುರಿತು ಕಾಲಾಂತರದಲ್ಲಿ ಸಾಕಷ್ಟು ಮಾರ್ಪಾಡುಗಳುಂಟಾಗಿದ್ದು ಶ್ಲಾಘನೀಯ. ವಚನ ಸಾಹಿತ್ಯ ಯುಗದಲ್ಲಿ ವಚನಗಾರ್ತಿಯರು ತಮ್ಮ ಭಾವನೆಗಳಿಗೆ ಬರಹದ ರೂಪು ನೀಡಿದರು. ಈ ನಿಟ್ಟಿನಲ್ಲಿ ನಂತರದ ಕಾಲಘಟ್ಟದಲ್ಲಿ ಗಣನೀಯ ಪರಿವರ್ತನೆಯಾಯಿತು. ವಿಶೇಷವೆಂದರೆ 20ನೇ ಶತಮಾನದಲ್ಲಿ ಸಾಹಿತ್ಯಿಕ ವಲಯದಲ್ಲಿ ಮಹಿಳಾ ಸಾಹಿತಿಗಳ ದಂಡೇ ಸೃಷ್ಟಿಯಾಯಿತು. ತಮ್ಮ ಬದುಕನ್ನ ಬರಹವನ್ನಾಗಿಸಿ ಪುರುಷ ನಿರ್ಮಿತ ಸಮಾಜದಲ್ಲಿ ಸ್ತ್ರೀ ಸಶಕ್ತಳಾಗಿ ಗುರುತಿಸಿಕೊಂಡದ್ದು ಬೌದ್ಧಿಕ ಹೋರಾಟದ ಫಲವೆಂದರೆ ತಪ್ಪಾಗಲಾರದು. ಸಾಹಿತ್ಯವು ಸಾಹಿತಿಯ ಅನುಭವಗಮ್ಯವಾದುದು. ಸಾಮಾಜಿಕ ಜೀವನವೇ ಸಾಹಿತ್ಯದ ಜೀವಾಳವಾದ್ದರಿಂದ ಸಮಕಾಲೀನ ಆಚರಣೆಗಳು, ಕಟ್ಟುಪಾಡುಗಳು, ಸ್ತ್ರೀ ಕುರಿತ ಅಭಿಪ್ರಾಯಗಳು, ಅಶಕ್ತತೆ, ಅನಿವಾರ್ಯತೆಗಳೆಲ್ಲವೂ ಕೂಡ ಲೇಖನಿಗೆ ಜೀವಧನಿಯಾದವು. ಪುರುಷ ಬರಹಗಾರರಲ್ಲಿನ ಸ್ತ್ರೀ ಸಂವೇದನೆಗಿಂತ ಸ್ತ್ರೀ ಕುರಿತ ಸ್ತ್ರೀ ಬರಹಗಾರರ ಬರಹಗಳು ಹೆಚ್ಚು ಮನನೀಯ. ಆದರೂ ಬದಲಾವಣೆಯೆಡೆಗೆ ಮುಖ ಮಾಡಿದ್ದ ಇಪ್ಪತ್ತನೆಯ ಶತಮಾನದ ಸಂದರ್ಭದಲ್ಲೂ ಮಹಿಳಾ ಪಾತ್ರಗಳು ದ್ವಿತೀಯ ದರ್ಜೆಯವಳಾಗಿ ಬಿಂಬಿಸಲ್ಪಟ್ಟಿದ್ದು ಶೋಚನೀಯ. ಮಹಿಳಾ ಸಾಹಿತಿಗಳಲ್ಲೂ ಸ್ತ್ರೀ ಕುರಿತ ಚಿಂತನೆಗಳು ಬದಲಾಗದಿದ್ದದ್ದು ವಿಪರ್ಯಾಸದ

ಸಂಗತಿ. ಈ ನಿಟ್ಟಿನಲ್ಲಿ ಎ. ಪಂಕಜ ಅವರ ಕಾದಂಬರಿಗಳು ಪರಿಗಣನೀಯ.

"ಕಾದಂಬರಿ ಪ್ರಕಾರವೇ ಆಧುನಿಕತೆಯೊಂದಿಗೆ ಹುಟ್ಟಿದ ಸಾಹಿತ್ಯ ಪ್ರಕಾರ. ಆಧುನಿಕತೆ ಹುಟ್ಟುಹಾಕಿದ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸುವುದಕ್ಕಾಗಿಯೇ ರೂಪುಗೊಂಡಿದ್ದು".[1] ಅಂತೆಯೇ ಎ. ಪಂಕಜ ಅವರ ಬಹಳಷ್ಟು ಕಾದಂಬರಿಗಳು ಪ್ರಸಕ್ತ ಸಾಮಾಜಿಕ ಜೀವನ ಹಾಗೂ ಸಮಸ್ಯೆಗಳನ್ನು ಸ್ತ್ರೀ ಕೇಂದ್ರಿತ ಕಾದಂಬರಿಗಳ ಮೂಲಕ ಚಿತ್ರಿಸುತ್ತವೆ. ಆದರೆ ಇವರೇ ಸೃಜಿಸಿದ ಬರಹಗಳಲ್ಲಿ ಸಾಮಾಜಿಕ ಪ್ರಜ್ಞೆಯಲ್ಲೊಂದಾದ ಸ್ತ್ರೀ ಸ್ಥಾನಮಾನವನ್ನು ಸಾಮಾಜಿಕವಾಗಿ ಉನ್ನತೀಕರಿಸುವ ಯಾವ ಪ್ರಯತ್ನವೂ ಸಹ ನಡೆದಿಲ್ಲ. ಕೆಲವೊಮ್ಮೆ ಆ ಬಗೆಯ ವೈಚಾರಿಕತೆಯ ಸುಳಿವು ಕಾಣಿಸಿಕೊಂಡರೂ ಆ ಬದಲಾವಣೆಯ ಜ್ವಾಲೆ ಆರಂಭದಲ್ಲೇ ಅಂತ್ಯ ಕಾಣುವುದು ಇಲ್ಲಿ ಸಹಜವಾಗಿದೆ. ಬದುಕುವುದು ಅನಿವಾರ್ಯವೆನಿಸಿದಾಗ ಮಾನವ ಬದುಕಿನಲ್ಲಾಗುವ ಸಾಮಾಜಿಕ ಹಾಗೂ ಸಾಂಸ್ಕೃತಿಕ ಪಲ್ಲಟಗಳನ್ನು ಇವರ ಕಾದಂಬರಿಗಳು ಸ್ತ್ರೀ ಪಾತ್ರ ಮುಖೇನ ಅಭಿವ್ಯಕ್ತಿಸುತ್ತವೆ. ಇವರ ಬಹಳಷ್ಟು ಕೇಂದ್ರ ಪಾತ್ರಗಳು ತಮ್ಮ ಬಯಕೆಗಳೊಟ್ಟಿಗೆ ಅಂತ್ಯವನ್ನೂ ಸಹ ಬೆಳೆಸಿಕೊಳ್ಳುತ್ತವೆ. ಮನುಷ್ಯ ಹುಟ್ಟಿನಿಂದ ಪ್ರತಿನಿತ್ಯ ಅಂತ್ಯದೆಡೆಗೇ ಸಾಗುತ್ತಾನೆ. ಆ ಮಾರ್ಗದಲ್ಲಿ ಸಿಗುವ ಧರ್ಮ, ಅರ್ಥ, ಕಾಮ, ಮೋಕ್ಷ ಪ್ರಮುಖ ಹಂತಗಳು. 'ಮೋಕ್ಷಸಿದ್ಧಿ' ಎಲ್ಲರ ಪ್ರಮುಖ ಗುರಿ. ಆದರೆ ಇಂದು ಎಲ್ಲಾ ವಯೋಮಾನದ ಎಷ್ಟೋ ಜನತೆ ಅಸಹಜವಾಗಿ ದುರಂತ ಅಂತ್ಯ ಕಾಣುತ್ತಿರುವುದು ದುಃಖಕರ. ಎ. ಪಂಕಜ ಅವರ ಹಲವು ಕಾದಂಬರಿಗಳ ಮಾರ್ಮಿಕ ಸಂಗತಿ ಎಂದರೆ ಇಂಥಾ ಅಸಹಜ ಸನ್ನಿವೇಶಗಳು ಅನೇಕ ಬಾರಿ ಎದುರಾಗುತ್ತವೆ. ಅದರಲ್ಲೂ ಸ್ತ್ರೀ ಪಾತ್ರಗಳೇ ಈ ರೀತಿಯಲ್ಲಿ ಚಿತ್ರಿಸಲ್ಪಟ್ಟಿರುವುದು ವಿಪರ್ಯಾಸದ ಸಂಗತಿ. ಇವರ ಕಾದಂಬರಿಗಳಲ್ಲಿ ಸ್ತ್ರೀ ಇಡೀ ಮನುಕುಲದ ಸಾಕ್ಷಿಪ್ರಜ್ಞೆಯಾಗಿ ಕಾಣಿಸಿಕೊಂಡರೂ ದುರಂತ ಅಂತ್ಯಕ್ಕೀಡಾಗುವುದು ಅಸಮಂಜಸವೆನಿಸುತ್ತದೆ.

ನಾಯಕಿಯೇ ಕೇಂದ್ರ ಪಾತ್ರವಾಗಿರುವ ಇವರ ಬಹುಪಾಲು ಕಾದಂಬರಿಗಳು ಹೆಣ್ಣಿನ ದುರಂತದಲ್ಲಿಯೇ ಮುಕ್ತಾಯವಾಗಿರುವುದು ಗಮನಿಸಬೇಕಾದ ಅಂಶ. ಒಂದು ವೇಳೆ ಕೇಂದ್ರ ಪಾತ್ರವಾಗಿ ನಾಯಕನಿದ್ದರೆ ಆ ಕಾದಂಬರಿ ಕೆಲವೊಮ್ಮೆ ಸುಖಾಂತ್ಯವಾಗಿರುವುದು ಆಶ್ಚರ್ಯ. ಕೆಲವು

ಕಾದಂಬರಿಗಳು ಅಂತ್ಯದಲ್ಲಿ ಒಂದೆಡೆ ಹೆಣ್ಣಿನ ದುರಂತ ಚಿತ್ರಣ ಮತ್ತೊಂದೆಡೆ ಗಂಡಿನ ಬದುಕಿನ ಹೊಸ ಶಕೆಯ ಆರಂಭದೊಂದಿಗೆ ಮಂಗಳ ಹಾಡಿವೆ. ಇವರ 'ಬಯಕೆಯ ಬೆಂಕಿ' ಕಾದಂಬರಿಯಂತೂ ಇತರ ಕಾದಂಬರಿಗಳಿಗಿಂತ ವಿಭಿನ್ನತೆಯನ್ನು ಮೈಗೂಡಿಸಿಕೊಂಡು ನಾಯಕಿ ಹಾಗೂ ನಾಯಕನ ದುರಂತದ ಸಾವಿನೊಂದಿಗೆ ಅಂತ್ಯ ಕಂಡಿದೆ. ಬದುಕಿಗೆ ಒಂದು ನಿಖರವಾದ ದಾರಿ ಸಿಗದಿದ್ದಾಗ ಬದುಕು ಹರಿಯುವ ನದಿಗೆ ಸಿಕ್ಕ ಹರಿಗೋಲಿನಂತಾಗುತ್ತದೆ. ಮೀರಿದ್ದನ್ನು ಬಯಸುವ ಮನಸಿಗೆ ಅತೃಪ್ತಿ, ಅಶಾಂತಿ, ನಿರಾಶೆ ಕಟ್ಟಿಟ್ಟ ಬುತ್ತಿ. ಅಸಮಂಜಸ ಬಯಕೆ ಬದುಕನ್ನು ಬೆಂಕಿಯಂತೇ ಸುಡುವುದೆಂಬುದು ಈ ಕಾದಂಬರಿಯ ವಸ್ತು.

ಮನೆಯವರೇ ನಿಶ್ಚಯಿಸಿದರೂ ಮನಸಾರೆ ಮೆಚ್ಚಿ ಮನದಲ್ಲೇ ಪ್ರೇಮಗೋಪುರ ಕಟ್ಟಿದ್ದ ಕುಮುದಾ ರಂಗನಾಥನ ತಾಟಸ್ಥ್ಯ ಧೋರಣೆಯಿಂದಾಗಿ ಆತನ ತಮ್ಮನನ್ನು ವಿವಾಹವಾಗುತ್ತಾಳೆ. ರಂಗನಾಥನ ಮೇಲಿನ ಕೋಪಕ್ಕೆ ಕುಮುದಾಳು ಚಾರಿತ್ರ್ಯಹೀನಳಾದ ನರ್ಮದಾಳ ಜೊತೆ ಆತನಿಗೆ ವಿವಾಹವಾಗಿಸುತ್ತಾಳೆ. ನಿಜ ಸಂಗತಿ ತಿಳಿದ ರಂಗನಾಥ ಕುಮುದಾಳನ್ನೇ ಅತ್ಯಾಚಾರವೆಸಗುತ್ತಾನೆ. ಆ ಸಮಯದಲ್ಲಿ ತೆಗೆದುಕೊಳ್ಳುವ ನಿರ್ಧಾರ ಹಾಗೂ ಅವನ ಬಯಕೆ ಅವನನ್ನೂ ತೀಕ್ಷ್ಣ ಕಿರಣಗಳಾಗಿ ದಹಿಸಿದವು. ಅತಿವರ್ತನೆಯಿಂದ ಪಶ್ಚಾತ್ತಾಪಗೊಂಡು ಕ್ಷಮೆ ಕೋರಿ ಬಾಳುವುದು ಮನುಷ್ಯ ಧರ್ಮ. ಕ್ಷಮಿಸುವುದು ಅದನ್ನು ಮೀರಿದ್ದೇ. ಆದರೆ ಆಕೆ ಪರಿಪರಿಯಾಗಿ ಬೇಡಿಕೊಂಡರೂ ರಂಗನಾಥನ ಮೃಗೀಯ ವರ್ತನೆ ಆಕೆ ಹಾಗೂ ಆಕೆಯ ಹೊಟ್ಟೆಯಲ್ಲಿದ್ದ ಮಗುವಿನ ದುರಂತ ಸಾವಿಗೆ ಕಾರಣವಾಗುತ್ತದೆ. ಇದೇ ಕಾದಂಬರಿಯಲ್ಲಿ ವಲ್ಲಿ (ವಿಜಯವಲ್ಲಿ) ಸಣ್ಣ ವಯಸ್ಸಿನವಳಾಗಿದ್ದಾಗ ಇದೇ ರಂಗನಾಥನನ್ನು ಮೆಚ್ಚಿರುತ್ತಾಳಾದರೂ ತಾಯಿಯ ಬಲವಂತದಿಂದ ಸಿನಿಮಾದಲ್ಲಿ ಖಳನಾಯಕನ ಪಾತ್ರ ವಹಿಸುತ್ತಿದ್ದ ಹಾಗೂ ರಂಗನಾಥನ ಬಾಲ್ಯದ ಗೆಳೆಯನಾದ ಶ್ರೀನಿವಾಸನನ್ನು ವರಿಸುತ್ತಾಳೆ. ಅಕೆಯ ಪ್ರತಿಯೊಂದು ಜೀವಾಣುವಿನಲ್ಲೂ ರಂಗನಾಥನೇ ಜೀವಂತವಾಗಿರುತ್ತಾನೆ. ಆದರೆ ಪ್ರೀತಿಯಿದ್ದರೂ ಹೇಳಿಕೊಳ್ಳಲಾಗದ ವಲ್ಲಿ ಶ್ರೀನಿವಾಸನ ಲೋಲುಪ ಜೀವನ ಮತ್ತು ದುರಾಸೆಯಿಂದ ಸಿನಿಮಾ ರಂಗಕ್ಕಿಳಿದು ಹಲವರ ವಿಷಯಾಸಕ್ತಿಗೆ ಗುರಿಯಾಗುತ್ತಾಳೆ. ಕೊನೆಗೆ ದೂರದ ಪಟ್ಟಣವೊಂದರಲ್ಲಿ ಮಾರಣಾಂತಿಕ ಗುಪ್ತರೋಗಕ್ಕೊಳಗಾಗಿ ಕಾಲವಾಗುತ್ತಾಳೆ. ಅವಳ ಅಕಾಲಿಕ ಮರಣ ಓದುಗರಲ್ಲಿ ಮರುಕ

ತರುತ್ತದೆಯೇ ಹೊರತು ಆ ದುರ್ಘಟನೆಗೆ ಕಾರಣನಾದ ಪುರುಷನನ್ನು ಕುರಿತು ಎಳ್ಳಷ್ಟೂ ಸಂಶಯ ತರಿಸದು. ಬಾಲ್ಯದಲ್ಲೇ ತಾಯಿಯನ್ನು ಕಳೆದುಕೊಂಡ ರಂಗನಾಥ ಬಾಲ್ಯದ ಬಯಕೆಗಳಾದ ರಕ್ತಸಂಬಂಧಿಗಳ ಪ್ರೀತಿ-ಪ್ರೇಮದಿಂದ ವಂಚಿತನಾಗಿ ಬೆಳೆದು ತಾನು ಪ್ರೀತಿಸಿದ, ತನ್ನನ್ನು ಪ್ರೀತಿಸಿದ ಎಲ್ಲರನ್ನೂ ಕಳೆದುಕೊಂಡು ವಲ್ಲಿ ಕೊನೆಯುಸಿರೆಳೆದಿದ್ದ ಕೊಠಡಿಯಲ್ಲೇ ವಿಷಪ್ರಾಶನ ಮಾಡಿ ಅಸುನೀಗುತ್ತಾನೆ.

ಇನ್ನು ಇದೇ ಕಾದಂಬರಿಯ ಉತ್ತರಾರ್ಧ ಭಾಗದ ನಾಯಕಿಯಾಗಿ ತೋರುವ ನಿರ್ಮಲೆ ರಂಗನಾಥನ ಎದೆಬಾಗಿಲ ತಟ್ಟಿದ್ದವಳು. ಅವಳಿಗೂ ಇವನ ಕುರಿತು ಒಲವಾಗಿ, ಮದುವೆಯಾಗುವ ನಿರ್ಧಾರ ಮಾಡಿ ದೇವಾಸ್ಥಾನದ ಬಳಿ ಹೋಗಿರುತ್ತಾರೆ. ಆದರೆ ರಂಗನಾಥನನ್ನು ಈ ಹಿಂದೆಯೇ ಮದುವೆಯಾಗಿದ್ದ ನರ್ಮದಾಳು ಬಂದು ಮದುವೆಯನ್ನು ನಿಲ್ಲಿಸುತ್ತಾಳೆ. ಅಪಮಾನಗೊಂಡ ನಿರ್ಮಲೆ ಸನ್ನಿವೇಶದಿಂದ ಪಕ್ಕಕ್ಕೆ ಸರಿಯುತ್ತಾಳೆ. ಆಕೆ ಎಲ್ಲಿ ಹೋದಳೋ ಏನಾದಳೋ ಏನೊಂದೂ ಅರಿಯದು. ನೊಂದು ಕಗ್ಗತ್ತಲು ಕವಿದಿದ್ದ ರಂಗನಾಥನ ಬದುಕಿನಲ್ಲಿ ಬೆಳಕು ತರುವ ಸದುದ್ದೇಶ ಹೊಂದಿದ್ದ ನಿರ್ಮಲೆಯ ಬದುಕು ಕಾದಂಬರಿಯ ಆಚೆಗೂ ಓದುಗರಿಗೆ ಪ್ರಶ್ನಾರ್ಥಕವಾಗಿ ಉಳಿಯುತ್ತದೆ.

ಬಯಕೆಯ ಕುಂಡಕ್ಕೆ ತುಪ್ಪ ಸುರಿದ ಬಾಡಿಗೆ ಮನೆಯ ಮಾಲೀಕಳ ಮಗಳಾದ ವಲ್ಲಿ, ಬಾಲ್ಯದ ಗೆಳತಿಯಾದ ಕುಮುದ, ಅಚಾನಕ್ಕಾಗಿ ನಾಯಕಿಯ ಸ್ಥಾನ ತುಂಬಲು ಬಂದ ನಿರ್ಮಲ ಎಲ್ಲರೂ ಬೆಂಕಿಯ ಕೋಟೆಯೊಳಗೆ ಸಿಲುಕಿ ಸಜೀವ ದಹನವಾದರೆನಿಸುತ್ತದೆ. ನೈಜ ಬದುಕಿನ ವಿವಿಧ ಆಯಾಮಗಳನ್ನು ಕಟ್ಟಿಕೊಡಲೆತ್ನಿಸುವ ಎ. ಪಂಕಜ ಅವರ ಕಾದಂಬರಿಗಳು ನೀರಸವಾಗಿಲ್ಲ. ಕಥಾಹಂದರಕ್ಕೆ ಸೂಕ್ತವಾದ ನೇರ ನಿರೂಪಣೆ ಹೊಂದಿರುವ ಇವರ ಕಾದಂಬರಿಗಳಲ್ಲಿ 'ಬದುಕು ನೀರ ಮೇಲಿನ ಗುಳ್ಳೆ' ಎಂಬ ನಿಲುವನ್ನು ಹಲವು ಸ್ತ್ರೀ ಪಾತ್ರಗಳು ಸಾಕ್ಷೀಕರಿಸುತ್ತವೆ. ಸ್ತ್ರೀ ಮನದ ತಲ್ಲಣಗಳನ್ನು ಚಿತ್ರಿಸುತ್ತಲೇ ಭಾರತೀಯ ಸನಾತನ ಸಂಸ್ಕೃತಿಯ ಜೊತೆಗೆ ಇಡೀ ಮಾನವ ಬದುಕನ್ನೇ ಕಟ್ಟಿಕೊಡುವ ಪ್ರಯತ್ನ ಮಾಡುತ್ತಾರೆ. ಕುಟುಂಬದಲ್ಲಿ, ಸಮಾಜದಲ್ಲಿ ಸ್ತ್ರೀ ಸ್ಥಾನಮಾನವನ್ನೇ ಮುಖ್ಯ ಕೇಂದ್ರವಾಗಿಸಿಕೊಂಡ ಕಾದಂಬರಿಗಳು ಹಲವು. ಸತ್ಯ-ಕಹಿಸತ್ಯಗಳ ನಡುವಿನ ಆಂತರಿಕ ಹೋರಾಟವಿರುವ ಇವರ 'ಮಾನಸ' ಕಾದಂಬರಿಯ

ನಾಯಕಿ ಜಾನಕಿ ತನ್ನೆದುರೇ ತನಗಾಗುತ್ತಿದ್ದ ಅನ್ಯಾಯವನ್ನ ವಿರೋಧಿಸದ ಅಸಹಾಯಕತೆಯ ಕೂಪದಲ್ಲಿ ಬಿದ್ದಿರುತ್ತಾಳೆ. ಬಾಲ್ಯವಿವಾಹವಾಗಿ, ಬಾಲ ವಿಧವೆಯಾಗಿ ತಾಯಿಯೊಂದಿಗೆ ಸಂಪ್ರದಾಯ ಪಾಲಿಸುತ್ತಾ ಬರುವ ಜಾನಕಿ, ವಯೋಸಹಜ ಆಕರ್ಷಣೆಗೊಳಗಾಗಿ ಅವಳ ಬದುಕು ಗಾಳಿಗೆ ಸಿಕ್ಕ ಸೊಡರಿನಂತಾಗುತ್ತದೆ.

ಹಳ್ಳಿಯಲ್ಲಿ ಹುಟ್ಟಿ ಬೆಳೆದು, ನಗರ ಸೇರಿದ ಜಾನಕಿ ಸ್ವಚ್ಛಂದದ ಬದುಕಿಗೆ ತೆರೆದುಕೊಳ್ಳಲಿಚ್ಚಿಸುತ್ತಾಳೆ. ನಿಜವಾದ ಸ್ನೇಹವಾಗಲಿ, ಪ್ರೀತಿಯಾಗಲಿ ಆಕೆಗೆ ಸಿಗುವುದೇ ಇಲ್ಲ. ಸಿಗುವುದೆಲ್ಲಾ ಮುಖವಾಡದ ಪಾತ್ರಗಳೇ…! "ಸ್ವತಂತ್ರವಾದ ಸಾಹಿತ್ಯವೂ ಜನತಾ ಜೀವನದ ಕನ್ನಡಿಯಾಗಿ, ಸುಖಮಯ, ಶಾಂತಿಮಯ, ಸಮತಾ ಸಮೃದ್ಧಿಮಯ ಜೀವನವನ್ನು ಅಣಿಗೊಳಿಸಲು ಸಹಾಯ ಮಾಡಬೇಕು"[2] ಎಂಬಂತೆ ಲೇಖಕಿಯ ಸಾಹಿತ್ಯ ಜನ ಜೀವನದ ಕನ್ನಡಿಯೇನೋ ಆಗಿದೆ, ಆದರೆ ಸ್ತ್ರೀಯನ್ನು ಪುರುಷನೆದುರು ಅಸಹಾಯಕಳಂತೇ ಬಿಂಬಿಸಲಾಗಿದೆ.

ಈಗಾಗಲೇ ಮೊದಲನೇ ಮದುವೆಯಾಗಿದ್ದವನೊಟ್ಟಿಗೇ ಎರಡನೇ ಹೆಂಡತಿಯಾಗಿ ಪ್ರತ್ಯೇಕ ಸಂಸಾರ ಹೂಡುತ್ತಾಳೆ. ಪ್ರತ್ಯೇಕವಾಗಿ ಉಳಿದದ್ದು ಇವಳಷ್ಟೇ, ಗಂಡನಲ್ಲ! ಸ್ವಾರ್ಥದ ಸುಖದುಃಖಗಳನ್ನೇ ಪ್ರಧಾನಿಸಿಕೊಳ್ಳುವ ಜಾನಕಿಯ ಗಂಡ ಪ್ರೇಮದ ವೈಶಾಲ್ಯತೆಯನ್ನು ಮರೆಯುತ್ತಾನೆ. ಬಹಳ ಚಾಣಾಕ್ಷನಂತೇ ಚಿತ್ರಿಸಲ್ಪಡುವ ಪುರುಷ ಪಾತ್ರ ಹೆಣ್ಣನ್ನು ಅಂದರೆ ನಾಯಕಿಯಾದ ಜಾನಕಿಯನ್ನು ಬಹಳ ನಾಜೂಕಾಗಿ ಮೋಸಗೊಳಿಸುತ್ತದೆ. ಅಷ್ಟಲ್ಲದೇ ಇದು ಆಕೆಯ ಅರಿವಿಗೆ ಬಂದರೂ ಹೊಂದಿಕೊಳ್ಳುವುದು ಅನಿವಾರ್ಯವೆಂಬಂತೆ, ಅಬಲೆಯಾಗಿ ನಿಲ್ಲುತ್ತಾಳೆ ಜಾನಕಿ. ಪ್ರಕೃತಿ ಸಹಜ ಬಯಕೆಗಳ ಬೆನ್ನು ಹತ್ತಿದ ಜಾನಕಿಯ ಬಾಳಿನುದ್ದಕ್ಕೂ ದೌರ್ಭಾಗ್ಯವೇ ಮುಂದಾಳತ್ವ ವಹಿಸಿದೆಯೆಂದರೂ ತಪ್ಪಾಗಲಾರದು. ಹೆತ್ತ ಮಗನಿಂದಲೂ ದೂರೀಕರಿಸಲ್ಪಡುವ ಜಾನಕಿ ಸಂಬಂಧಗಳನ್ನೆಲ್ಲಾ ಕಳೆದುಕೊಂಡು ಮಾನಸಿಕ ಖಿನ್ನತೆಯಿಂದ ಮನೆಯಲ್ಲೇ ಮರಣ ಹೊಂದುತ್ತಾಳೆ. ಆಕೆಯ ಮನಸ್ಸನ್ನ ಅರಿತು ನಡೆಯುವ ಯಾವೊಂದು ಪುರುಷ ಪಾತ್ರವೂ ಬೆಂಬಲವಾಗಿ ಬಾರದಿರುವುದು ಅಮಾನವೀಯ ಸಂಗತಿ.

ಸಾಹಿತ್ಯವೆಂದರೆ ಕೇವಲ ಬಂಧಗಳನ್ನೆಣೆದು ಮಾಡಿದ ಸಂಬಂಧವಷ್ಟೇ ಅಲ್ಲ. ಸಾಹಿತ್ಯವು ಜನಜೀವನದ ಪ್ರತಿಬಿಂಬ,

ಪ್ರಾಪಂಚಿಕಕ್ಕೂ ಸಾಹಿತ್ಯಕ್ಕೂ ನೇರಾನೇರ ಕೊಂಡಿಯಿರುತ್ತದೆ. ಬರಹಗಾರರು ಸಮಾಜ ಜೀವಿ ಎಂಬ ಮಾತು ಇದನ್ನು ಪುಷ್ಟೀಕರಿಸುತ್ತದೆ. ಅಂತೆಯೇ ಮಾನವನ ಸಾಮಾಜಿಕ ಜೀವನ ಸ್ತ್ರೀ ಕೇಂದ್ರಿತ ಕಥಾಹಂದರವುಳ್ಳ 'ಬಲಿಪಶು' ಕಾದಂಬರಿ ಸಾದರೀಕರಿಸಿದೆ. ಭವಿಷ್ಯದ ಜೀವನದ ಬಗೆಗೆ ಮಧುರ ಭಾವನೆಯನ್ನಿಟ್ಟುಕೊಂಡಿದ್ದ ಸ್ತ್ರೀ ಪಾತ್ರದ ಸುತ್ತಣ ಕಥೆ ವಿಸ್ತರಿಸಲ್ಪಟ್ಟಿದೆ. ಶೈಕ್ಷಣಿಕವಾಗಿ ಮೇಲೇರ ಬಯಸಿದ್ದ ನಾಯಕಿ ಮಂಜುಳಾಳ ಶಿಕ್ಷಣವೂ ಮೊಟಕುಗೊಂಡಿದ್ದು ಪುರುಷ ಪ್ರಧಾನತೆಯಿಂದಲೇ ಎಂಬುದು ವಿಷಾದನೀಯ. ಬಾಲ್ಯವಿವಾಹಕ್ಕೆ ಗುರಿಯಾಗುವ ಈಕೆ, ಗಂಡನಿಂದ ಯಾವುದೇ ಬಗೆಯ ನೆಮ್ಮದಿ ಕಂಡುಕೊಳ್ಳಲಿಲ್ಲ. ಹೆಣ್ಣಿನ ಮನಸ್ಸನ್ನ ಹೆಣ್ಣೇ ಅರಿಯಬಲ್ಲಳೆಂಬ ಮಾತಿನಂತೆ ಸ್ತ್ರೀ ಪೋಷಕ ಪಾತ್ರವರ್ಗ ಕಾದಂಬರಿಯಲ್ಲಿ ಬೆಂಬಲವಾಗಿ ನಿಂತರೂ ಪುರುಷ ವರ್ಗ ಈಕೆಯನ್ನು ಹಿಂಸಿಸದೇ ಬಿಡದು. ಬಾಲ್ಯದಲ್ಲಿ ಸಹಪಾಠಿಯಿಂದ ಶಾಲೆ ತೊರೆದಳು, ವೈದ್ಯರೋರ್ವರ ಕರುಣೆಯಿಂದ ಆಸ್ಪತ್ರೆಯಲ್ಲಿ ಕೆಲಸಕ್ಕೆ ಸೇರಿದರೂ ಆ ವೈದ್ಯನ ಮಗನಿಂದಲೇ ಕೆಲಸ ಬಿಡಬೇಕಾಯಿತು. ಶಾಲಾ ಮುಖ್ಯೋಪಾಧ್ಯಾಯನ ವಿಷಯಾಸಕ್ತಿಗೆ ಮಣಿ ಹಾಕದೇ ಶಾಲೆಯನ್ನೂ ತೊರೆದು, ಶ್ರೀಮಂತನೋರ್ವನಲ್ಲಿ ಆಪ್ತ ಸಲಹಾಗಾರ್ತಿಯಾಗಿ ಕೆಲಸಕ್ಕೆ ಸೇರುವ ಈಕೆ ಆತನಿಂದಲೂ ದೈಹಿಕ ಹಲ್ಲೆಗೊಳಗಾಗುತ್ತಾಳೆ. ಮೇಲಿನ ಒಂದೆರಡು ಸಂದರ್ಭಗಳಲ್ಲಿ ಪ್ರತಿರೋಧ ಒಡ್ಡುತ್ತಾಳೆ, ಆದ್ರೆ ಅದು ಓದುಗರಿಗೆ ಪಲಾಯಾನವಾದವೆನಿಸದಿರದು. ಈ ಶ್ರೀಮಂತನ ಶೋಷಿತ ಪ್ರವೃತ್ತಿಯಿಂದಾಗಿ ಆಕೆಯಲ್ಲಿ ಆತ್ಮಾಭಿಮಾನದ ಜಯಘೋಷ ಮೊಳಗಿ ಪ್ರತಿರೋಧಿಸುತ್ತಾಳೆ. ಆದರೆ ಜಯ ಮಾತ್ರ ದೊರಕದೇ ಪುರುಷತ್ವಕ್ಕೆ ಬಲಿಯಾಗುತ್ತಾಳೆ. ಈ ಅಪಮಾನದಿಂದಲೇ ಆಕೆ ಆತ್ಮಹತ್ಯೆಯ ಹಾದಿ ಹಿಡಿಯುತ್ತಾಳೆ. ಇನ್ನು ಇದೇ ಕಾದಂಬರಿಯ ಪದ್ಮಿನಿ ಎಂಬ ಮತ್ತೊಂದು ಪಾತ್ರವೂ ಸಹ ದುರಂತ ಅಂತ್ಯ ಕಾಣುತ್ತದೆ. ಅದಕ್ಕೂ ಪುರುಷ ಇಲ್ಲವೇ ಪುರುಷ ನಿರ್ಮಿತ ಸಮಾಜವೇ ಕಾರಣವಾಗಿದ್ದರೂ ಪುರುಷನನ್ನು ನೇರವಾಗಿ ಪ್ರಶ್ನಿಸುವ ಇಲ್ಲವೇ ಆಕೆಯ ಸಾವಿಗೆ ಪುರುಷ ನಿರ್ಮಿತ ಸಮಾಜವನ್ನು ಹೊಣೆಯಾಗಿಸುವ ಯಾವ ಸನ್ನಿವೇಶವೂ ಇಲ್ಲ. ಬದಲಿಗೆ ಅವಳ ಅನೈತಿಕ ಮಾರ್ಗದ ಫಲವೇ ಆಕೆಯ ವಿಲಾಸಿ ಬದುಕು ಎಂದು ಚಿತ್ರಸಲಾಗಿದೆ. ಕಡೆಗೆ ಆಕೆ ಮಾರಣಾಂತಿಕ ಕಾಯಿಲೆಗೊಳಗಾಗಿ ಅರ್ಧಾಯಷ್ಯಳಾಗುತ್ತಾಳೆ. ಏನನ್ನೂ ವಿರೋಧಿಸದ ಪದ್ಮಿನಿ ತನ್ನ ವಿಲಾಸಿ ಬದುಕನ್ನು ತೊರೆದು ಬದುಕಬಹುದಿತ್ತು. ಆದರೆ ಆಕೆಯ ಪಾತ್ರ ಪೂರ್ವ

ನಿಯೋಜಿತಗೊಂಡಿದೆ. ಸಾಲದೆಂಬಂತೆ ನಾಯಕಿ ಮಂಜುಳಾ ದೈಹಿಕ ಹಲ್ಲೆಗೊಳಗಾದ ನಂತರ ತನ್ನದಲ್ಲದ ತಪ್ಪಿಗೆ ಪ್ರಾಯಶ್ಚಿತ್ತವಾಗಬೇಕೆಂದು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಆದರೆ ಸಾಮಾಜಿಕ ವಾಸ್ತವ ಚಿತ್ರಣವನ್ನು ಕಟ್ಟಿಕೊಡುವ ಭರದಲ್ಲಿ, ಪುರುಷ ವರ್ಗವನ್ನೇ ಪ್ರಧಾನಿಸುವ ಲೇಖಕಿಯ ಪೂರ್ವ ಕಲ್ಪನೆಯೂ ಸಹ ಪಾತ್ರಗಳ ದುಡುಕಿನ ನಿರ್ಧಾರದಲ್ಲಿ ಪಾಲು ಪಡೆದಿದೆ. 'ಹೆಣ್ಣು ಅಬಲೆಯಲ್ಲ ಸಬಲೆ' ಎಂದು ನಿರೂಪಿಸಲೆತ್ನಿಸಿದ ಬಲಿಪಶು ಕಾದಂಬರಿಯ ಕೇಂದ್ರ ಪಾತ್ರವಾದ ಮಂಜುಳಾ ಸೋತು ಆತ್ಮಹತ್ಯೆಗೆ ಶರಣಾಗುತ್ತಾಳೆ.

ಕೇಂದ್ರ ಪಾತ್ರಗಳೆರಡೂ ವ್ಯವಸ್ಥೆಯನ್ನು ವಿರೋಧಿಸಿ ಜಯ ಕಾಣದೇ, ಇಷ್ಟಪಟ್ಟ ಹೊಸ ಬದುಕನ್ನೂ ಕಟ್ಟಿಕೊಳ್ಳಲಾಗದ 'ಅವನೇ ಕಾರಣ' ಕಾದಂಬರಿಯಲ್ಲಿ ಭಾರತೀಯ ಸಂಸ್ಕೃತಿಗೆ ವಿರೋಧವೆನಿಸುವ ಅಣ್ಣ (ನಾಯಕ)-ತಂಗಿ (ನಾಯಕಿ) ವಿವಾಹವಾಗುತ್ತದೆ. ಚಿಕ್ಕಮ್ಮ ದೊಡ್ಡಮ್ಮನ ಮಕ್ಕಳ ವಿವಾಹಕ್ಕೆ ಕುಟುಂಬ-ಸಮಾಜ ವಿರೋಧ ವ್ಯಕ್ತಪಡಿಸಿದರೂ ಯಾರೊಬ್ಬರ ಮಾತಿಗೂ ಸೊಪ್ಪು ಹಾಕದೇ ವಿವಾಹವಾಗಿ ಯಶಸ್ವಿ ಜೀವನ ನಡೆಸಲಾಗದೇ ಕಡೆಗೆ ನಾಯಕಿ ಪಾರ್ವತಿ ಅಕಾಲಿಕ ಮರಣಕ್ಕೀಡಾಗುತ್ತಾಳೆ.

ಇನ್ನು ಅಣ್ಣನ ಇಷ್ಟಕ್ಕೆ ಮನ್ನಣೆ ನೀಡುವ 'ಪ್ರೇಮ ಸಂಗಮ' ಕಾದಂಬರಿಯ ದ್ವಿತೀಯ ನಾಯಕಿಯಾಗಿ ಬಿಂಬಿಸಲ್ಪಟ್ಟ ವೀಣಾ ತನಗೂ ಪ್ರೇಮವಿದ್ದುದ್ದರಿಂದ ನಾಯಕನನ್ನು ವಿವಾಹವಾಗುತ್ತಾಳೆ. ಆದರೆ ದಿನದಿಂದ ದಿನಕ್ಕೆ ಆಕೆ ವಿಲಾಸಿ ಬದುಕಿಗೆ ಮಾರುಹೋಗಿ ಕಡೆಗೆ ಮೊದಲ ಮಗುವಿನ ಹೆರಿಗೆಯ ಸಂದರ್ಭದಲ್ಲಿ ಕಾಲವಾಗುತ್ತಾಳೆ. ಮಾನವನ ಬದುಕಿನ ನೈಜತೆಯನ್ನೇ ಕಟ್ಟಿಕೊಡಲೆತ್ನಿಸಿರುವುದು ಪ್ರಶಂಸನೀಯ. ಆದರೆ ಆ ಭರದಲ್ಲಿ ಹೆಣ್ಣನ್ನು ದ್ವಿತೀಯ ದರ್ಜೆಯವಳಾಗಿ ಇಲ್ಲವೇ ಪುರುಷನೆದುರು ಅಸಹಾಯಕಳಂತೇ ಚಿತ್ರಿಸಿರುವುದು ಪ್ರಶ್ನಾರ್ಹವಾದ ವಿಷಯ. "ಲೇಖಕಿ ಸಮಾಜವನ್ನು ನೋಡುವ ದೃಷ್ಟಿಕೋನ ಮೂರು ರೀತಿಯದು. ಈ ಸಮಾಜದ ಸಾಂಪ್ರದಾಯಿಕ ನೆಲೆಗಳಲ್ಲಿ ಬೆಳೆದು ವ್ಯವಸ್ಥೆಯನ್ನು ವೈಭವೀಕರಿಸುವಂತಹುದು, ಈ ವ್ಯವಸ್ಥೆಯಲ್ಲಿಯೇ ಸುಧಾರಣೆ ಕಂಡುಕೊಳ್ಳಲು ಹೋಗಿ ದ್ವಂದ್ವ ಸ್ಥಿತಿಯಲ್ಲಿ ಬೀಳುವಂತಹುದು, ಸಂಪೂರ್ಣ ಈ ವ್ಯವಸ್ಥೆಯನ್ನೇ ವಿರೋಧಿಸಿ ಹೊಸ ವ್ಯವಸ್ಥೆಯ ನಿರ್ಮಾಣಕ್ಕಾಗಿ ಸೈದ್ಧಾಂತಿಕವಾಗಿ ಆಲೋಚಿಸುವುದು".[3] ಈ ಮೂರೂ ರೀತಿಯ ಅಂಶಗಳು

ಎ. ಪಂಕಜ ಅವರ ಕಾದಂಬರಿಗಳ ವೈಶಿಷ್ಟವಾಗಿವೆ. ಸಾಂಪ್ರದಾಯಿಕ ನೆಲೆಗಳಲ್ಲಿ ಹುಟ್ಟಿ ಬೆಳೆಯುವ 'ಮಾನಸ' ಕಾದಂಬರಿಯ ನಾಯಕಿ ಜಾನಕಿ, ವ್ಯವಸ್ಥಿತ ಕಟ್ಟುಪಾಡುಗಳನ್ನು ಧಿಕ್ಕರಿಸಿ ಕಡೆಗೆ ಬದುಕನ್ನು ದುರಂತವಾಗಿಸಿಕೊಳ್ಳುತ್ತಾಳೆ. ತನ್ನ ಮನದ ಬಯಕೆಗಳ ಈಡೇರಿಕೆಗೆ ಅಲೆಯುವ 'ಬಯಕೆಯ ಬೆಂಕಿ' ಕಾದಂಬರಿಯ ಪ್ರಧಾನ ಪಾತ್ರಗಳೂ ಕೂಡ ದುರಂತ ಅಂತ್ಯ ಕಾಣುತ್ತವೆ. ಇನ್ನು ತನ್ನ ವೈಯಕ್ತಿಕ ಹಿತಾಸಕ್ತಿಗಳಿಗೆ ಮೊದಲ ಆದ್ಯತೆ ನೀಡುವ 'ಅವನೇ ಕಾರಣ' ಕಾದಂಬರಿಯ ನಾಯಕಿ ಪಾರ್ವತಿ ಭಾರತೀಯ ಸಂಸ್ಕೃತಿಯ ಕಟ್ಟಳೆಗಳನ್ನು ಮೀರುವ ಪ್ರಯತ್ನ ಮಾಡಿ ಆಕೆಯೂ ಸಹ ಅಕಾಲಿಕ ಮರಣ ಹೊಂದುತ್ತಾಳೆ.

ಕನ್ನಡ ಕಾದಂಬರಿ ಪ್ರಕಾರ ತನ್ನಿಂತಾನೇ ಒಮ್ಮಿಂದೊಮ್ಮೆಲೆ ದೊಡ್ಡ ರೂಪು ತಾಳಿಲ್ಲ. ನವಜಾತ ಶಿಶು ಎಲ್ಲವನ್ನೂ ಎಲ್ಲರನ್ನೂ ನೋಡುತ್ತಾ ಅನುಕರಿಸುತ್ತಾ ಬೆಳೆದು ದೊಡ್ಡವನಾಗುವಂತೆ ಪಾಶ್ಚಾತ್ಯ ಮೂಲಗಳಿಂದ, ಪ್ರಭಾವದಿಂದ, ಸಂಪರ್ಕದಿಂದ ಕ್ರಮಾನುಗತವಾಗಿ ಬೆಳೆದ ಕಾದಂಬರಿ ಸಾಹಿತ್ಯ ಪ್ರಕಾರ ಇಂದು ಆಜಾನುಬಾಹುವಾಗಿ ನಿಂತಿದೆ. ಅಂತೆಯೇ ಬರಹಗಾರರು ತಮ್ಮ ಬದುಕಿನ ಸಂತೋಷದ ಕ್ಷಣಗಳನ್ನು ಇಲ್ಲವೇ ಬವಣೆಗಳನ್ನು ಅಭಿವ್ಯಕ್ತಿಸಲು ಇದೊಂದು ಸೂಕ್ತ ವೇದಿಕೆಯಾಯಿತು. "ಪ್ರತಿ ಕಾದಂಬರಿಕಾರನೂ ತನ್ನ ಕೃತಿಯಲ್ಲಿ ಒಂದು ಜಗತ್ತನ್ನು ಸೃಷ್ಟಿಸಲು ಹೊರಡುತ್ತಾನೆ. ಆ ಜಗತ್ತು ಓದುವವನ ಮೇಲೆ ಯಾವ ಪರಿಣಾಮ ಉಂಟು ಮಾಡಬೇಕೆಂದು ಬಯಸುತ್ತಾನೋ ಆ ಪರಿಣಾಮವನ್ನು ಮಾಡಲು ಸಹಾಯಕವಾದ ವಿವರಗಳನ್ನು ಆರಿಸಿಕೊಳ್ಳುತ್ತಾನೆ."[4] ಹೀಗೆಯೇ ಸ್ತ್ರೀ ಬದುಕನ್ನು ಚಿತ್ರಿಸಲೆತ್ನಿಸಿದ ಲೇಖಕಿ, ಅದಕ್ಕಾಗಿ ಸೂಕ್ತ ಮಾರ್ಗೋಪಾಯಗಳನ್ನು ಅನುಸರಿಸಿದರು. ಪೂರ್ವೋದ್ದೇಶದಂತೆಯೇ ಸಮಕಾಲೀನ ಸಾಮಾಜಿಕ ವ್ಯವಸ್ಥೆಯೇ ಕಾದಂಬರಿಯ ರೂಪು ತಾಳಿದೆ. ಮಹಿಳಾ ಸಾಹಿತ್ಯ ಪರಂಪರೆಯ ಹೆಜ್ಜೆ ಗುರುತುಗಳನ್ನು ಗುರುತಿಸಿ ಸಾಹಿತ್ಯಿಕ ವಲಯದಲ್ಲಿ ಪುರುಷನಷ್ಟೇ ಸೇವೆಗೈದು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಗಟ್ಟಿಯಾಗಿ ನೆಲೆನಿಂತ ಎ. ಪಂಕಜರವರ ಪ್ರಚಂಡ ಕ್ರಿಯಾಶೀಲತೆ ಇವರ ಕಾದಂಬರಿಗಳಿಗೆ ಜೀವರಸವನ್ನು ತುಂಬಿದೆ. ಸಾಮಾಜಿಕ ಮೌಲ್ಯಗಳನ್ನು ಸಾರುವ ಎ. ಪಂಕಜ ಅವರ ಕಾದಂಬರಿಗಳ ಸಾಕಷ್ಟು ಪಾತ್ರಗಳು ಉದ್ದೇಶಪೂರ್ವಕವಾಗಿ, ಅನಿವಾರ್ಯತೆಯಿಂದಾಗಿ, ಆಕಸ್ಮಿಕವಾಗಿ ಅಕಾಲಿಕ ಮರಣಕ್ಕೀಡಾಗುತ್ತವೆ. ಇಲ್ಲವೇ ಪುರುಷನ ನೆರಳಲ್ಲೇ

ಬದುಕಬೇಕಾದ ಅನಿವಾರ್ಯತೆಗೆ ಸಿಲುಕಿ, ಅವನ ನೆರಳಲ್ಲಷ್ಟೇ ಸುಖಿಸುವಂತೇ ಚಿತ್ರಿತಳಾಗಿದ್ದಾಳೆ. ದುರಂತ ಕಾಣಿಸದಿದ್ದರೆ ಲೇಖಕಿಗೆ ಸಮಾಧಾನವಿಲ್ಲವೇನೋ ಎಂದು ಓದುಗರಿಗೆ ಅನ್ನಿಸದಿರದು. ಸ್ತ್ರೀ ಪಾತ್ರಗಳ ಅದಮ್ಯ ಪ್ರೇಮ ಪರಿಧಿಯೊಳಗೆ ಪುರುಷ ಪಾತ್ರಗಳಾವುವೂ ಬರಲಿಲ್ಲ. ಒಂದು ವೇಳೆ ಬಂದರೂ ಸಮಯ ಸಾಧಕತನವೆಂದೇ ಭಾವಿಸಬಹುದು. ಒಂದಿನಿತೂ ಕ್ಲಿಷ್ಟತೆಯನ್ನೊಳ್ಳದ ಇವರ ಬರಹಗಳು ಸಹೃದಯರಿಂದ ಬಹುಬೇಗ ಸ್ವೀಕೃತಗೊಳ್ಳುತ್ತವೆ. ವಿಶಾಲತೆಯಿಂದ ನಿರೂಪಿತವಾದ ಕಥೆ 'ಮರಣ'ವೆಂಬ ಸಂಕೀರ್ಣ ಘಟನೆಯೊಡನೇ ಅಂತ್ಯಕಾಣುತ್ತವೆ. ಇವರ ಕಾದಂಬರಿಗಳಲ್ಲಿ ಕಾವ್ಯಮಯವಾದ ವರ್ಣನೆ ಕಾಣಸಿಗದಿದ್ದರೂ ಸಹೃದಯರ ಚಿತ್ತವೃತ್ತಿಯನ್ನು ಕಾಡುವ ಹಲವು ಪಾತ್ರಗಳು ಮಾರ್ಮಿಕವಾಗಿ ಚಿತ್ರಿಸಲ್ಪಟ್ಟಿವೆ. ಕೇಂದ್ರ ಪಾತ್ರದ ಸ್ವಗತದೊಂದಿಗೆ ಕುಟುಂಬವೊಂದರಲ್ಲಿ ಪ್ರಾರಂಭವಾಗುವ ಕಥೆ ಮುಂದುವರೆದಂತೆ ಸಮಸಮಾಜದ ಎಲ್ಲಾ ವಲಯಗಳನ್ನೂ ಆವರಿಸಿಕೊಳ್ಳುವುದು ಇವರ ಕಾದಂಬರಿಗಳ ವೈಶಿಷ್ಟ್ಯವಾಗಿದೆ.

## ಅಡಿಟಿಪ್ಪಣಿಗಳು:

1. ಗಿರಡ್ಡಿ ಗೋವಿಂದರಾಜು. (2012). ಸಮಗ್ರ ವಿಮರ್ಶೆ: ಸಂಪುಟ - 3. ಪು.ಸಂ. 151
2. ಕಯ್ಯಾರ ಕಿಞ್ಞಣ್ಣ ರೈ. (1989). ಸಾಹಿತ್ಯ ದೃಷ್ಟಿ (ಲೇಖನ ಮತ್ತು ಭಾಷಣಗಳು). ಪು. ಸಂ. 59
3. ವಿಜಯಶ್ರೀ ಸಬರದ. (1994). ಅನುಪಮಾ ನಿರಂಜನ ಅವರ ಕಾದಂಬರಿಗಳು: ಒಂದು ಸಾಹಿತ್ಯಿಕ ಅಧ್ಯಯನ. ಪು.ಸಂ. 37
4. ಶೇಷಗಿರಿ ರಾವ್ ಎಲ್. ಎಸ್. (1990). ಕಾದಂಬರಿ-ಸಾಮಾನ್ಯ ಮನುಷ್ಯ. ಪು.ಸಂ. 20

## ಆಕರ ಗ್ರಂಥಗಳು:

1. ಪಂಕಜ ಎ. (2009). ಪ್ರೇಮ ಸಂಗಮ. ಇಂದಿರಾ ಪ್ರಕಾಶನ. ಬೆಂಗಳೂರು.
2. ಪಂಕಜ ಎ. (2011). ಬಯಕೆಯ ಬೆಂಕಿ. ಶ್ರೀ ಲಕ್ಷ್ಮೀ ವೆಂಕಟೇಶ್ವರ ಪ್ರಕಾಶನ. ಬೆಂಗಳೂರು.
3. ಪಂಕಜ ಎ. (2011). ಮಾನಸ. ಶ್ರೀ ಲಕ್ಷ್ಮೀ ವೆಂಕಟೇಶ್ವರ ಪ್ರಕಾಶನ. ಬೆಂಗಳೂರು.
4. ಪಂಕಜ ಎ. (2012). ಅವನೇ ಕಾರಣ. ಓಂ ಶಕ್ತಿ ಪ್ರಕಾಶನ. ಬೆಂಗಳೂರು.
5. ಪಂಕಜ ಎ. (2012). ಬಲಿಪಶು. ಇಂದಿರಾ ಪ್ರಕಾಶನ. ಬೆಂಗಳೂರು.

## ಪರಾಮರ್ಶನ ಗ್ರಂಥಗಳು:

1. ಕಯ್ಯಾರ ಕಿಞ್ಞಣ್ಣ ರೈ (1989). ಸಾಹಿತ್ಯ ದೃಷ್ಟಿ (ಲೇಖನಗಳು ಮತ್ತು ಭಾಷಣಗಳು). ಕರ್ನಾಟಕ ಸಂಘ. ಪುತ್ತೂರು, ದಕ್ಷಿಣ ಕನ್ನಡ.
2. ಗೋವಿಂದರಾಜು ಗಿರಡ್ಡಿ. (2012). ಸಮಗ್ರ ವಿಮರ್ಶೆ: ಸಂಪುಟ-3. ಸಪ್ನ ಬುಕ್ ಹೌಸ್ (ಪ್ರೈ) ಲಿ. ಬೆಂಗಳೂರು.
3. ವಿಜಯಶ್ರೀ ಸಬರದ. (1994). ಅನುಪಮಾ ನಿರಂಜನ ಅವರ ಕಾದಂಬರಿಗಳು: ಒಂದು ಸಾಹಿತ್ಯಿಕ ಅಧ್ಯಯನ. ಡಿ. ವಿ. ಕೆ. ಮೂರ್ತಿ ಪ್ರಕಾಶನ. ಮೈಸೂರು.
4. ಶೇಷಗಿರಿರಾವ್ ಎಲ್. ಎಸ್. (1990). ಕಾದಂಬರಿ: ಸಾಮಾನ್ಯ ಮನುಷ್ಯ. ಶಾರದಾ ಪ್ರಕಾಶನ. ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.